# ದಾವಣಗೆರೆ ವಿಶ್ವವಿದ್ಯಾನಿಲಯ

**ಕುಲಸಚಿವರು(ಪರೀಕ್ಷಾಂಗ)ರವರ ಕಛೇರಿ, ಶಿವಗಂಗೋತ್ರಿ, ದಾವಣಗೆರೆ-577007**

**ದೂ.ಸಂಖ್ಯೆ: 08192-208420,208104**


ಸಂಖ್ಯೆ:ದಾವಿ:ಪವಿ:ಪಪ್ರ-81:2023-24: 3122 ದಿನಾಂಕ:12-09-2023

## :: ಪರೀಕ್ಷಾ ಪ್ರಕಟಣೆ::

ವಿಷಯ: ನವೆಂಬರ್-2023ರಲ್ಲಿ ನಡೆಯುವ ಎಂ.ಬಿ.ಎ ಪದವಿಯ UUCMSತಂತ್ರಾಂಶದ 1ನೇ ಮತ್ತು 2ನೇ ಸೆಮಿಸ್ಟರ್ (ರೆಗ್ಯುಲರ್ ಮತ್ತು ರಿಪೀಟರ್ಸ್) ವಿದ್ಯಾರ್ಥಿಗಳಿಗೆ ಪರೀಕ್ಷಾ ಅರ್ಜಿ/ಶುಲ್ಕ ಪಾವತಿಸುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 28.07.2023

*****

ವಿಶ್ವವಿದ್ಯಾನಿಲಯವು ವ್ಯಾಪ್ತಿಗೊಳಪಡುವ ಎಲ್ಲಾ ಎಂ.ಬಿ.ಎ ವಿಭಾಗದ ಅಧ್ಯಕ್ಷರು/ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ನವೆಂಬರ್-2023ರಲ್ಲಿ ನಡೆಯುವ ಎಂ.ಬಿ.ಎ ಪದವಿಯ 1ನೇ ಮತ್ತು 2ನೇ ಸೆಮಿಸ್ಟರ್ (ರೆಗ್ಯುಲರ್ ಮತ್ತು ರಿಪೀಟರ್ಸ್) ವಿದ್ಯಾರ್ಥಿಗಳಿಗೆ ಲಿಖಿತ ಪರೀಕ್ಷೆಗಳ ವಿವರವಾದ ವೇಳಾಪಟ್ಟಿಯನ್ನು ನಂತರ ಪ್ರಕಟಿಸಲಾಗುವುದು. ಇದಕ್ಕೆ ಪೂರಕವಾದ ಇತರ ಮಾಹಿತಿಯನ್ನು ಕೆಳಗೆ ನೀಡಲಾಗಿದೆ ಹಾಗೂ ಪರೀಕ್ಷಾ ಶುಲ್ಕವನ್ನು ಡಿಜಿಟಲ್ ಮಾಧ್ಯಮದ ಮೂಲಕ ಸಂದಾಯ ಮಾಡುವುದು ಕಡ್ಡಾಯವಾಗಿದೆ.

ಎಂ.ಬಿ.ಎ ಪದವಿಯ ಅಭ್ಯರ್ಥಿಗಳಿಗೆ ಆಯಾ ಅಧ್ಯಯನ ವಿಭಾಗಗಳನ್ನು ಪರೀಕ್ಷಾ ಕೇಂದ್ರಗಳನ್ನಾಗಿ ನಿಗಧಿಪಡಿಸಲಾಗಿದೆ.

<u>ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ದಿನಾಂಕಗಳು</u>

| | | |
|---|---|---|
| 01. ದಂಡ ಶುಲ್ಕ ರಹಿತ | : | 13/09/2023 ರಿಂದ 23/09/2023 ರವರೆಗೆ |
| 02. ರೂ.120/- ದಂಡ ಶುಲ್ಕ ಸಹಿತ | : | 24/09/2023 ರಿಂದ 26/09/2023 ರವರೆಗೆ |
| 03. ರೂ..600/- ದಂಡ ಶುಲ್ಕ ಸಹಿತ | : | 27/09/2023 |

**ಸ್ನಾತಕೋತ್ತರ ಎಂ.ಬಿ.ಎ ಪದವಿಯ ಸೆಮಿಸ್ಟರ್‌ನ ಪರೀಕ್ಷೆಗಳು**

**ವೃತ್ತಿಪರಕೋರ್ಸ್‌ಗಳಿಗೆ ಮಾತ್ರ (M.B.A)**

| ಕ್ರಮ ಸಂಖ್ಯೆ | ವಿವರ | ಪರೀಕ್ಷಾ ಶುಲ್ಕ | ಅಂಕಪಟ್ಟಿ ಶುಲ್ಕ | ಒಟ್ಟು |
|---|---|---|---|---|
| 01 | ಪರೀಕ್ಷಾ ಅರ್ಜಿಯ ಶುಲ್ಕ | ರೂ.100/- | ---- | ರೂ.100/- |
| 02 | ಸೆಮಿಸ್ಟರ್ ಪೂರ್ಣ ಪರೀಕ್ಷೆಗೆ (ಪ್ರತ್ಯೇಕವಾಗಿ) | ರೂ.1915/- | ರೂ.185/- | ರೂ.2100/- |
| 03 | ಸೆಮಿಸ್ಟರ್‌ನ ಒಂದು ಪತ್ರಿಕೆಗೆ (ಥಿಯರಿ/ಪ್ರಾಯೋಗಿಕ) | ರೂ.375/- | ---- | ರೂ.375/- |

| ಅನುತ್ತೀರ್ಣ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಶುಲ್ಕ | ಪ್ರತಿ ಸೆಮಿಸ್ಟರ್‌ಗೆ |
|---|---|
| | ರೂ.185/- |

**<u>ವಿಶೇಷ ಸೂಚನೆ:</u>**

**UUCMS ತಂತ್ರಾಂಶದ ಎಲ್ಲಾ ಸ್ನಾತಕೋತ್ತರ ಪದವಿಗಳ ದ್ವಿತೀಯ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಪ್ರಥಮ ಸೆಮಿಸ್ಟರ್‌ನಲ್ಲಿ ಅನುತ್ತೀರ್ಣಗೊಂಡ ವಿಷಯಗಳ ಪರೀಕ್ಷೆ ತೆಗೆದುಕೊಳ್ಳಲು ಇಚ್ಛಿಸಿದ್ದಲ್ಲಿ online ಮುಖಾಂತರ <u>ಪ್ರತಿ ಪತ್ರಿಕೆಯ ಶುಲ್ಕ ರೂ.375/-</u> ಪಾವತಿಸಬೇಕು ಮತ್ತು <u>ಪ್ರತಿ ಸೆಮಿಸ್ಟರ್‌ನ ವಿಶೇಷ ಶುಲ್ಕ ರೂ.1165/-ಗಳನ್ನು</u> offline ಮುಖಾಂತರ ಪರೀಕ್ಷಾ ವಿಭಾಗದ ಖಾತೆಗೆ (ಸಂಖ್ಯೆ:64050447124) ಹಣ ಪಾವತಿಸಿ Challanನ್ನು ಪರೀಕ್ಷಾಂಗ ವಿಭಾಗಕ್ಕೆ ತಮ್ಮ ವಿಭಾಗಗಳ ಮುಖಾಂತರ ಸಲ್ಲಿಸಲು ತಿಳಿಸಲಾಗಿದೆ.**

## Challenging Valuation (ಸವಾಲಿನ ಮೌಲ್ಯಮಾಪನ)

| ಸವಾಲಿನ ಮೌಲ್ಯಮಾಪನಕ್ಕೆ ನಿಗದಿಪಡಿಸಿರುವ ಶುಲ್ಕ<br>(ಫಲಿತಾಂಶ ಪ್ರಕಟಗೊಂಡ 10 ದಿನದೊಳಗಾಗಿ ಅರ್ಜಿ ಸಲ್ಲಿಸಬೇಕು) | ಪ್ರತಿ ಪತ್ರಿಕೆಗೆ ರೂ.2200/- |
|---|---|

## ವಿದ್ಯಾರ್ಥಿಗಳಿಗೆ ಸೂಚನೆ:-

- ವಿದ್ಯಾರ್ಥಿಗಳು Online ಮುಖಾಂತರ ಅರ್ಜಿ ಸಲ್ಲಿಸಲು https://uucms.karnataka.gov.in/Login/Indexನಲ್ಲಿ Student login ಆಗಿ ಪರೀಕ್ಷೆ ತೆಗೆದುಕೊಳ್ಳುವ ಸೆಮಿಸ್ಟರ್‌ವಾರು/ವಿಷಯವಾರು ಗುರುತು ಮಾಡಿ ಪರೀಕ್ಷಾ ಅರ್ಜಿಯನ್ನು ಸಲ್ಲಿಸಬೇಕು.
- ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಪಾವತಿ ಮಾಡುವುದಕ್ಕೆ ಮುಂಚಿತವಾಗಿ ಎಲ್ಲಾ ಮಾಹಿತಿಗಳ ನಿಖರತೆಯನ್ನು ಖಾತರಿಪಡಿಸಿಕೊಳ್ಳಬೇಕು.
- ವಿದ್ಯಾರ್ಥಿಗಳು ಯಾವುದೇ ಪರೀಕ್ಷೆಯನ್ನು ಪ್ರಥಮ ಅವಕಾಶದಲ್ಲಿ ಬರೆಯುತ್ತಿದ್ದರೆ, ಅಂತಹ ಸಂದರ್ಭದಲ್ಲಿ ಎಲ್ಲಾ ವಿಷಯಗಳನ್ನು ಕಡ್ಡಾಯವಾಗಿ ತೆಗೆದುಕೊಳ್ಳುವುದು.
- ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸುವುದಕ್ಕೆ ಮುಂಚಿತವಾಗಿ ಪರೀಕ್ಷೆ ಬರೆಯಬೇಕಾದ ವಿಷಯಗಳನ್ನು ಖಚಿತ ಪಡಿಸಿಕೊಳ್ಳುವುದು.
- ವಿದ್ಯಾರ್ಥಿಗಳಿಗೆ ಪರೀಕ್ಷೆ ಶುಲ್ಕವನ್ನು ಪಾವತಿ ಮಾಡುವ ವಿಧಾನ.
  - ವಿದ್ಯಾರ್ಥಿಯು UUCMS login ಮುಖಾಂತರ Payment Gateway ಸೌಲಭ್ಯವನ್ನು ಬಳಸಿಕೊಂಡು (Debit Card / Credit Card / Net Banking / Wallet, ಇತ್ಯಾದಿ) ಹಣ ಪಾವತಿಸಬಹುದು.
- ಪರೀಕ್ಷಾ ಶುಲ್ಕವನ್ನು ಪಾವತಿಸಿದ ನಂತರ ಶೈಕ್ಷಣಿಕ ಅವಧಿ ಮುಗಿಯುವರೆಗೂ ತರಗತಿಗಳಿಗೆ ಹಾಜರಾಗಿ ನಿಯಮಾನುಸಾರ ಹಾಜರಾತಿ ಗಳಿಸುವುದು ಕಡ್ಡಾಯವಾಗಿರುತ್ತದೆ. ಇಲ್ಲವಾದಲ್ಲಿ ಪರೀಕ್ಷೆ ಬರೆಯಲು ಅನರ್ಹರು.

**ವಿಶೇಷ ಸೂಚನೆ:** ವಿದ್ಯಾರ್ಥಿಗಳು Internet Browsing centerನ ಮಾಲೀಕರ ಬ್ಯಾಂಕ್ ಖಾತೆಯ ಮೂಲಕ ವಿಶ್ವವಿದ್ಯಾನಿಲಯಕ್ಕೆ ಹಣ ಪಾವತಿಸುವ ಸಂದರ್ಭದಲ್ಲಿ ಉಂಟಾಗುವ ತಾಂತ್ರಿಕ ತೊಂದರೆಗಳಿಗೆ ವಿದ್ಯಾರ್ಥಿಗಳೇ ಜವಾಬ್ದಾರರು ಹಾಗೂ ಎರಡು ಬಾರಿ ಶುಲ್ಕ ಪಾವತಿಸಿದ್ದಲ್ಲಿ ಮಾರುಪಾವತಿಗೆ(No Refund) ಅವಕಾಶ ಇರುವುದಿಲ್ಲ.

- ಈ ಅವಕಾಶವು ಸದರಿ ಕೋರ್ಸಿನ ಎರಡರಷ್ಟು ಅವಧಿಗೆ (Double the Duration) ಮಾತ್ರ ಅನ್ವಯಿಸುತ್ತದೆ.

## -:ಅಧ್ಯಕ್ಷರು/ಸಂಯೋಜನಾಧಿಕಾರಿಗಳು/ಪ್ರಾಚಾರ್ಯರಿಗೆ ಸೂಚನೆಗಳು:-

- ಪರೀಕ್ಷೆಗೆ ಸಂಬಂಧಪಟ್ಟ ಎಲ್ಲಾ ಕಾರ್ಯಗಳನ್ನು UUCMS ನ College login ಮುಖಾಂತರ ಮಾಡಬೇಕು.
- ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಕಟ್ಟುವುದಕ್ಕಿಂತ ಮುಂಚಿತವಾಗಿ ಶೈಕ್ಷಣಿಕವಾಗಿ ಅರ್ಹತೆಗಳು ಹೊಂದಿದ್ದಾರೆ ಎಂದು ಖಚಿತ ಪಡಿಸಿಕೊಳ್ಳಬೇಕು.
- UUCMS ನ login ಮುಖಾಂತರ ವಿದ್ಯಾರ್ಥಿಗಳ ಪರೀಕ್ಷೆ ಅರ್ಹತೆಯನ್ನು ದೃಢೀಕರಿಸಬೇಕು.
- ಸ್ನಾತಕೋತ್ತರ ವಿಭಾಗ/ಕಾಲೇಜು ದೃಢೀಕರಿಸಿದ ಮಾಹಿತಿಗಳನ್ನು ವಿದ್ಯಾರ್ಥಿಗಳಿಗೆ UUCMSನ login ಮುಖಾಂತರ ತಿಳಿಸಲಾಗುವುದು.
- S.S.P ಪೋರ್ಟಲ್ ಮುಖಾಂತರ ಸಮಾಜ ಕಲ್ಯಾಣ ಇಲಾಖೆಯಿಂದ ನೇರವಾಗಿ ಆಯಾ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ವಿದ್ಯಾರ್ಥಿ ವೇತನ ಜಮಾ ಮಾಡಲಾಗುತ್ತಿರುವುದರಿಂದ, ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಪೂರ್ಣ ಶುಲ್ಕವನ್ನು ಪಾವತಿಸಬೇಕು.
- ರೂ. 2.5 ಲಕ್ಷಗಳ ಆದಾಯಕ್ಕಿಂತ ಮೇಲ್ಪಟ್ಟ ಎಸ್. ಸಿ / ಎಸ್.ಟಿ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕ ಪಾವತಿಸಬೇಕು. ಮರುಯತ್ನದ (Repeaters) ಮತ್ತು ದಂಡ ಶುಲ್ಕದೊಂದಿಗೆ ಪರೀಕ್ಷಾ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳಿಗೆ ಯಾವುದೇ ಶುಲ್ಕ ವಿನಾಯಿತಿ ಇರುವುದಿಲ್ಲ.
- ಪ್ರವರ್ಗ-1ಕ್ಕೆ 2.5ಲಕ್ಷ ಹಾಗೂ ರೂ. 1ಲಕ್ಷ ಅಥವಾ ಇದಕ್ಕಿಂತ ಕಡಿಮೆ ಕುಟುಂಬದ ವಾರ್ಷಿಕ ಆದಾಯವನ್ನು ಹೊಂದಿರುವ 2ಎ, 2ಬಿ, 3ಎ, 3ಬಿ ಹಾಗೂ ಇತರೆ Freshers ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು. ಆದರೆ, ವಿದ್ಯಾರ್ಥಿಗಳ ಅರ್ಹತೆ ಮತ್ತು ಮೆರಿಟ್ ಆಧರಿಸಿ ಸರ್ಕಾರದ ಅನುದಾನದ ಲಭ್ಯತೆಗೆ ಒಳಪಟ್ಟುಶುಲ್ಕ ಮರುಬರಿಕೆ ಮೊತ್ತವನ್ನು ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಇಲಾಖೆಯಿಂದ ನೇರವಾಗಿ ಆಯಾ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಎನ್.ಇ.ಎಫ್.ಟಿ ವ್ಯವಸ್ಥೆ ಮೂಲಕ ಜಮಾ ಮಾಡಲಾಗುವುದೆಂದು ಸರ್ಕಾರದ ಆದೇಶ ಸಂಖ್ಯೆ:ಸ.ಕ.ಇ./201/ಬಿ.ಎಂ.ಎಸ್.2011 ಬೆಂಗಳೂರು ದಿನಾಂಕ: 23-06-2012ರಲ್ಲಿ ತಿಳಿಸಿರುತ್ತಾರೆ.
- ವಿದ್ಯಾರ್ಥಿಗಳ ಪರೀಕ್ಷಾ ಪ್ರವೇಶ ಪತ್ರವನ್ನು ವಿಶ್ವವಿದ್ಯಾನಿಲಯದ ನಿರ್ದೇಶಾನುಸಾರ ಕಾಲೇಜುಗಳಲ್ಲಿ ಮುದ್ರಿಸಿ ಒದಗಿಸತಕ್ಕದ್ದು.
- ವಿಶ್ವವಿದ್ಯಾನಿಲಯವು ಸ್ನಾತಕೋತ್ತರ ವಿಭಾಗ/ಕಾಲೇಜುಗಳಿಗೆ ಒದಗಿಸುವ ಪ್ರಶ್ನೆ ಪತ್ರಿಕೆಗಳ ಸಂಖ್ಯೆಯನ್ನು UUCMS ನ login ಮುಖಾಂತರ ತಿಳಿಸುವುದು. ಕಾಲೇಜುಗಳು ಇದನ್ನು ಪರಿಶೀಲಿಸಿ ಯಾವುದಾದರು ವ್ಯತ್ಯಯವಿದ್ದರೆ ಅದನ್ನು ವಿಶ್ವವಿದ್ಯಾನಿಲಯದ ಅಧಿಕಾರಿಗಳ ಗಮನಕ್ಕೆ ತರುವುದು.

- Invigilator Dairy ಯನ್ನು (02 ಪ್ರತಿಗಳು) ಆನ್‌ಲೈನ್ ಮೂಲಕವೇ ಸಿದ್ದಪಡಿಸಿಕೊಳ್ಳಬೇಕು ಹಾಗೂ ಆಯಾ ದಿನದ ಉತ್ತರ ಪತ್ರಿಕೆ ಬಂಡಲ್‌ಗಳ ಜೊತೆಯಲ್ಲಿಯೇ 01 ಪ್ರತಿಯನ್ನು ಕಳುಹಿಸಿಕೊಡುವುದು.
- ಪರೀಕ್ಷೆಗೆ ಗೈರುಹಾಜರಾದ ವಿದ್ಯಾರ್ಥಿಗಳ ನೊಂದಣಿ ಸಂಖ್ಯೆ ಮತ್ತು ವಿಷಯವನ್ನು (QP Code) ಆನ್ ಲೈನ್ ಮೂಲಕವೇ ನಮೂದಿಸುವುದು.
- ನಿಯಮಾನುಸಾರ ವಿಶ್ವವಿದ್ಯಾನಿಲಯವು ಅನುಮೋದನೆ ನೀಡಿರುವ ವಿದ್ಯಾರ್ಥಿಗಳಿಂದ ಮಾತ್ರ ಪರೀಕ್ಷಾ ಅರ್ಜಿ ಹಾಗೂ ಶುಲ್ಕ ಸಂಗ್ರಹಿಸಬೇಕು.
- **ಆಂತರಿಕ ಅಂಕಗಳ** ಮಾರ್ಕ್ಸ್ ಲೀಸ್ಟ್‌ಗಳನ್ನು ಕಡ್ಡಾಯವಾಗಿ ಸಮರ್ಪಕವಾಗಿ **ಪರಿಶೀಲಿಸಿ** ಹಾಗೂ ಡೀನರ **ಅನುಮೋದನೆ ಪಡೆದು** 27.10.2023 **ಮುಂಚೆಯೇ UUCMS** ತಂತ್ರಾಂಶದಲ್ಲಿ **ಆಂತರಿಕ ಅಂಕಗಳನ್ನು** ನಮೂದಿಸುವುದು. ಫಲಿತಾಂಶ **ನೀಡಿದ ನಂತರ ಯಾವುದೇ ತಿದ್ದುಪಡಿ/ ಮಾರ್ಪಾಡುಗಳಿಗೆ ಅವಕಾಶ ಇರುವುದಿಲ್ಲ.**
- **UUCMS** ತಂತ್ರಾಂಶದನುಸಾರ ಪರೀಕ್ಷಾ **ಪ್ರವೇಶ** ಪತ್ರ **ಪಡೆಯಲು** ಪರೀಕ್ಷಾ **ಪೂರ್ವದಲ್ಲೇ** ಥಿಯರಿ/ಪ್ರಾಯೋಗಿಕ ವಿಷಯಗಳ ಆಂತರಿಕ **ಅಂಕಗಳು ಮತ್ತು ಹಾಜರಾತಿಯನ್ನು** ತಂತ್ರಾಂಶದಲ್ಲಿ **ನಮೂದಿಸುವುದು ಖಡ್ಡಾಯವಾಗಿರುತ್ತದೆ.**
- ಮುದ್ರಿತ ನಮೂನೆಗಳು(ಸೈದ್ಧಾಂತಿಕ/ಪ್ರಾಯೋಗಿಕ) ಹಾಗೂ ಲೇಖನ ಸಾಮಗ್ರಿಗಳ ಬೇಡಿಕೆ ಪಟ್ಟಿಯನ್ನು ಸಹ **ದಿನಾಂಕ:27–10–2023** ರೊಳಗಾಗಿ ವಿಶ್ವವಿದ್ಯಾನಿಲಯಕ್ಕೆ ತಪ್ಪದೇ ಸಲ್ಲಿಸತಕ್ಕದ್ದು.
- ವಿಶ್ವವಿದ್ಯಾನಿಲಯದ ಆಂತರಿಕ ಕಿರುಪರೀಕ್ಷೆಯ ಉತ್ತರ ಪತ್ರಿಕೆ (ಬ್ಲೂ ಬುಕ್) ಗಳನ್ನು ಹಿಂಪಡೆಯುವುದರಿಂದ ಸೈದ್ಧಾಂತಿಕ ಪರೀಕ್ಷೆ ಪ್ರಾರಂಭಕೆ ಮುಂಚೆ ಆಂತರಿಕ ಅಂಕಗಳಿಗೆ ಸಂಬಂಧಿಸಿದಂತೆ ಯಾವುದೇ ತೊಂದರೆಗಳು ಇದ್ದಲ್ಲಿ ಅದನ್ನು ಬಗೆಹರಿಸಿಕೊಳ್ಳಬೇಕು. ತದನಂತರ ಬರುವಂತಹ ಆಂತರಿಕ ಅಂಕಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.
- ಪರೀಕ್ಷಾ ಫೀ ಪಾವತಿಸದೇ ಇರುವ ವಿದ್ಯಾರ್ಥಿಗಳನ್ನು ಪರೀಕ್ಷೆ ಬರೆಯಲು ಅನುಮತಿಸಿ ನಂತರದಲ್ಲಿ ಫಲಿತಾಂಶ ಬಾರದ ಬಗ್ಗೆ ದೂರು ನೀಡುವುದನ್ನು ಗಮನಿಸಲಾಗಿದೆ. ಈ ಬಾರಿ ಇಂತಹ ಪ್ರಕರಣಗಳು ಬಾರದಂತೆ ಎಚ್ಚರವಹಿಸಬೇಕು. ಒಮ್ಮೆ ಪರೀಕ್ಷೆ ಬರೆಸಿದಲ್ಲಿ ಅಭ್ಯರ್ಥಿ ಪಟ್ಟಿಯಲ್ಲಿ ಹೆಸರು ಇಲ್ಲದವರ ಫಲಿತಾಂಶ ನೀಡಲು ಅವಕಾಶವಿರದಂತೆ ಸಾಫ್ಟ್‌ವೇರ್‌ನಲ್ಲಿ ಮಾರ್ಪಾಡು ಮಾಡಿಕೊಳ್ಳಲಾಗಿದೆ. ವಿದ್ಯಾರ್ಥಿಗಳಿಗೆ ಇದನ್ನು ತಿಳಿಸುವುದು.
- ಪ್ರಸ್ತುತ ಸಾಲಿನಲ್ಲಿ ಪ್ರವೇಶ ಪಡೆದು ಶೈಕ್ಷಣಿಕ ವಿಭಾಗದಿಂದ ಅನುಮೋದನೆಗೊಂಡ ವಿದ್ಯಾರ್ಥಿಗಳನ್ನು ಮಾತ್ರ ಪರೀಕ್ಷೆಗೆ ಹಾಜರು ಪಡಿಸುವ ಹೊಣೆಯು ಕಾಲೇಜಿನ ಪ್ರಾಂಶುಪಾಲರದ್ದಾಗಿರುತ್ತದೆ. ತಪ್ಪಿದಲ್ಲಿ ತಮ್ಮನ್ನೆ ನೇರ ಹೊಣೆಗಾರರನ್ನಾಗಿ ಮಾಡಲಾಗುತ್ತದೆ.
- ಪರೀಕ್ಷೆಗೆ ಗೈರು ಹಾಜರಾದ ವಿದ್ಯಾರ್ಥಿಗಳ ಪಟ್ಟಿಯನ್ನು (Absentee Statement) ಪ್ರತ್ಯೇಕವಾಗಿ ಆಯಾ ದಿನದಂದೇ ವಿಶ್ವವಿದ್ಯಾನಿಲಯಕ್ಕೆ ಕಳುಹಿಸಬೇಕು.

**ಕುಲಸಚಿವರು (ಪರೀಕ್ಷಾಂಗ)**
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ - 577007.

ಗೆ,

ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಎಂ.ಬಿ.ಎ. ವಿಭಾಗ/ಕಾಲೇಜುಗಳ ಪ್ರಾಚಾರ್ಯರುಗಳಿಗೆ.

ಪ್ರತಿ:

1. ಸಮಾಜ ಕಲ್ಯಾಣ ಅಧಿಕಾರಿಗಳು, ಸಮಾಜ ಕಲ್ಯಾಣಾಧಿಕಾರಿಗಳ ಕಛೇರಿ, ದಾವಣಗೆರೆ/ಚಿತ್ರದುರ್ಗ ಜಿಲ್ಲೆ.
2. ಜಿಲ್ಲಾಧಿಕಾರಿಗಳು, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ, ದಾವಣಗೆರೆ/ಚಿತ್ರದುರ್ಗ ಜಿಲ್ಲೆ.
3. ಆಪ್ತಶಾಖೆ, ಮಾನ್ಯ ಕುಲಪತಿಗಳು, ಕುಲಸಚಿವ(ಆಡಳಿತ), ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
4. ಉಪಕುಲಸಚಿವರು (ಪರೀಕ್ಷಾಂಗ), ಉಪಕುಲಸಚಿವರು(ಆಡಳಿತ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
5. ಅಧೀಕ್ಷಕರು, ವಿಷಯ ನಿರ್ವಾಹಕರುಗಳು, ಪರೀಕ್ಷಾಂಗ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
6. ಪ್ರಾದೇಶಿಕ ಮುಖ್ಯಸ್ಥರು, ಲಾಜಿಸಿಸ್, ದಾವಣಗೆರೆ.
7. ಕಛೇರಿ ಪ್ರತಿ.